Spl. Case No.75/2018
PW. 35, CW.35

ದಿನಾಂಕ : 09-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

12. ದಿನಾಂಕಃ 29-06-2017 ರಂದು ಹಿಂದಿನ ಮುಖ್ಯಾಧಿಕಾರಿಗಳು ರಾವುಸಾಬ ನೇಮನ್ನ ಬಾಬನ್ನ ಅವರ ಹೆಸರಿಗೆ ನೀಡಿದ್ದ ಕಟ್ಟಡ ಪರವಾನಿಗೆಯನ್ನು ರದ್ದು ಮಾಡಿ, ಆ ಬಗ್ಗೆ ರಾವುಸಾಬ ನೇಮನ್ನ ಬಾಬನ್ನ, ಶ್ರೀಮಂತ ನೇಮನ್ನ ಬಾಬನ್ನ ಅವರಿಗೆ ನೋಟಿಸನ್ನು ನೀಡಿರುತ್ತಾರೆ. ನೋಟಿಸಿನ ಧೃಡೀಕೃತ ನಕಲನ್ನು ಹಾಜರುಮಾಡಿದ್ದೇನೆ. ಅವುಗಳನ್ನು ಕ್ರಮವಾಗಿ ನಿಪಿ-62 ಮತ್ತು ನಿಪಿ-63 ಎಂದು ಗುರುತಿಸಲಾಯಿತು. ಸದರಿ ನೋಟಿಸನ್ನು ನೊಂದಾಯಿತ ಅಂಚೆ ಮೂಲಕವೂ ಸಹ ಕಳುಹಿಸಲಾಗಿತ್ತು. ಆದರೆ ರಾವುಸಾಬ ನೇಮನ್ನ ಬಾಬನ್ನ, ಶ್ರೀಮಂತ ನೇಮನ್ನ ಬಾಬನ್ನ ಅವರು ಎರಡೂ ನೋಟಿಸಗಳನ್ನು ಸ್ವೀಕರಿಸಿರುವುದಿಲ್ಲ.

13. ದಿನಾಂಕಃ 26-08-2017 ರಂದು ಬೆಳಗ್ಗೆ 10:00 ಗಂಟೆಗೆ ಬಸಪ್ಪ ಮಾದರ ಅವರು ನಮ್ಮ ಕಚೇರಿಗೆ ಬಂದಿದ್ದರು, ರಾವುಸಾಬ ಬಾಬನ್ನ ಅವರು ವಿವಾದಿತ ಸ್ಥಳದಲ್ಲಿ ಕಟ್ಟಡ ಕಟ್ಟಲು ಪ್ರಾರಂಭ ಮಾಡಿದ್ದಾರೆ ಎಂದು ಹೇಳಿದರು. ನಾನು ಸ್ಥಳಕ್ಕೆ ಭೇಟಿ ದಾಖಲೆ ಪರಿಶೀಲಿಸಿ ರಾವುಸಾಬ ಬಾಬನ್ನ ಅವರಿಗೆ ಕಟ್ಟಡ ಕಟ್ಟಲು ನಿಮಗೆ ನೀಡಲಾಗಿದ್ದ ಪರವಾನಿಗೆಯನ್ನು ರದ್ದುಗೊಳಿಸಲಾಗಿದೆ, ಕಟ್ಟಡ ಕಟ್ಟುವ ಕೆಲಸವನ್ನು ನೀವು ನಿಲ್ಲಿಸಬೇಕು ಎಂದು ನಾನು ಹೇಳಿದ್ದೇನು, ಅದಕ್ಕೆ ಅವರುಗಳು ಇದು ನಮ್ಮ ಜಾಗ ಇದೆ ನಾವು ಪರವಾನಿಗೆಯನ್ನು ಪಡೆದುಕೊಂಡಿದ್ದೇವೆ, ನಾವು ಕಟ್ಟುತ್ತೇವೆ ಎಂದು ಹೇಳಿದರು.

**ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀ.ಬಿ.ಜೆ.ಜೆ ವಕೀಲರಿಂದ**

ಮುಗಳಖೋಡ ಗ್ರಾಮ ಪಂಚಾಯಿತಿಯಿಂದ 2017-18 ರಲ್ಲಿ ಮೇಲ್ದರ್ಜೆಗೆ ಅ

ಅಂದರೆ ಮುಗಳಖೋಡ ಪುರಸಭೆ ಆಗಿರಬಹುದು ಆ ಬಗ್ಗೆ ನನಗೆ ಸರಿಯಾದ ಮಾಹಿತಿ ಇಲ್ಲ. ಮುಗಳಖೋಡ ಪುರಸಭೆಯಲ್ಲಿ ಪ್ರತ್ಯೇಕ ದಾಖಲಾತಿಗಳ ವಿಭಾಗ ಇದೆ ಎನ್ನುವುದು ಸರಿ. ಪೋಲಿಸರು ಹಾಜರುಪಡಿಸುವಂತೆ ಕೇಳಿದ ದಾಖಲೆಗಳನ್ನು ನಾನು ಮೂಲ ಕಡತ ಪರಿಶೀಲಿಸಿ , ಲಭ್ಯವಿದ್ದ ದಾಖಲೆಗಳ ಧೃಡೀಕೃತ ಪ್ರತಿಗಳನ್ನು ನೀಡಿದ್ದೇನೆ. ಬಾಬನ್ನವರಿಗೆ ಕಟ್ಟಡ ಕಟ್ಟಲು ನೀಡಿದ ಪರವಾನಿಗೆ ಸಂಬಂಧಿಸಿದ ದಾಖಲೆಗಳ ಧೃಡೀಕೃತ ಪ್ರತಿಗಳನ್ನೂ ಸಹ ನಾನು ಪೋಲಿಸರಿಗೆ ನೀಡಿದ್ದೇನೆ.

2. ಕಾಯ್ದೆ ಪ್ರಕಾರ ಶುಲ್ಕವನ್ನು ಪಾವತಿಸಿಕೊಂಡು ಕಟ್ಟಡ ಕಟ್ಟಲು ಪರವಾನಿಗೆಯನ್ನು ನೀಡಲಾಗಿದೆ ಎನ್ನುವುದು ಸರಿ. ಪರವಾನಿಗೆಯನ್ನು ಪಡೆಯುವಾಗ ನಿಯೋಜಿತ ಕಟ್ಟಡದ ನೀಲಿ ನಕ್ಷೆಯನ್ನೂ ಸಹ ಪುರಸಭೆಗೆ ಹಾಜರುಮಾಡಲಾಗಿತ್ತು ಎನ್ನುವುದು ಸರಿ.

**<u>ಪಾಟೀ ಸವಾಲು 3 ರಿಂದ 34 ನೇ ಆರೋಪಿತರ ಪರ ಶ್ರೀ ಎ.ಬಿ.ಬಿ .ವಕೀಲರಿಂದ</u>**

1 ಮತ್ತು 2 ನೇ ಆರೋಪಿತರ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 3 ರಿಂದ 34 ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ಬೆಳಗಾವಿ.

Spl. Case No.75/2018
PW. 35, CW.35